ಶ್ರೀ ಡಿ.ವಿ. ಸದಾನಂದಗೌಡ :- ಸಭಾಧ್ಯಕ್ಷರೆ ವಿಶೇಷವಾಗಿ ಪುರಾತನ ಐತಿಹಾಸಿಕ ಸ್ಥಳಗಳೆಂದು ನಾವು ಗುರುತಿಸಬೇಕಾದರೆ ಅದು ನೂರಕ್ಕಿಂತ ಹೆಚ್ಚು ವರ್ಷ ಇತಿಹಾಸ ಇರುವಂಥದ್ದು ಆಗಿರಬೇಕು. ಈ ರೀತಿಯ ಯಾವುದೇ ಕ್ಷೇತ್ರಗಳು, ಪುರಾತನ, ಐತಿಹಾಸಿಕ ಪ್ರವಾಸಿ ಸ್ಥಳಗಳು ಜಗಳೂರಿನಲ್ಲಿ ಇರುವುದಿಲ್ಲ. ಆದರೆ ಅಲ್ಲಿ ಪ್ರವಾಸೋದ್ಯಮವನ್ನು ಅಭಿವೃದ್ಧಿ ಪಡಿಸಬೇಕೆಂಬ ಉದ್ದೇಶದಿಂದ ಸರ್ಕಾರ ಕಣ್ವ ಕೊಪ್ಪ ಗ್ರಾಮದ ಜವಳು ಮಠದ ಬಳಿ ಸುಮಾರು 129.65 ರೂ. ಗಳ ವೆಚ್ಚದಲ್ಲಿ ಯಾತ್ರಿ ನಿವಾಸವನ್ನು ನಿರ್ಮಾಣ ಮಾಡಿದೆ. ಅದರ ಕೆಲಸ ಮುಗಿದಿದ್ದು, ಇನ್ನೆರಡು ತಿಂಗಳಿನಲ್ಲಿ ಲೋಕಾರ್ಪಣೆ ಮಾಡಲು ತಯಾರಾಗಿದೆ. ಇದರ ಜೊತೆಗೆ ಓಂಕಾರ ಉಚ್ಚಂಗಿ ಮಠದ ಬಳಿ ಸುಮಾರು ರೂ. 70 ಲಕ್ಷದಲ್ಲಿ ಇನ್ನೊಂದು ಯಾತ್ರಿ ನಿವಾಸದ ಕೆಲಸ ವೇಗದಲ್ಲಿದೆ. ಇನ್ನು ಮೂರು ತಿಂಗಳಿನಲ್ಲಿ ಮುಗಿಯುತ್ತದೆ. ಜಗಳೂರಿನಲ್ಲಿ ಈ ರೀತಿ ಪ್ರವಾಸೋದ್ಯಮಕ್ಕೆ ಬೇಕಾದಂತಹ ಬೇರೆ ಬೇರೆ ಕೆಲಸ ಕಾರ್ಯಗಳನ್ನು ಮಾಡಲು ಸರ್ಕಾರ ಮುತುವರ್ಜಿ ವಹಿಸುತ್ತದೆ.

ಕಟ್ಟಡ ನಿರ್ಮಿಸುತ್ತಿರುವುದು

21 : (106)

ಶ್ರೀ ರುದ್ರೇಶ್‌ಗೌಡ ವೈ.ಎಸ್., ಬೇಲೂರು ವಿಧಾನಸಭಾ ಸದಸ್ಯರು

ಅ) ರಾಜ್ಯ ಪ್ರವಾಸೋದ್ಯಮ ಇಲಾಖೆ ವತಿಯಿಂದ ಬೇಲೂರು ಯಗಚಿ ಜಲಾಶಯದ ಬಳಿ ಅಂತರಾಷ್ಟ್ರೀಯ ಮಟ್ಟದ ವಸತಿ ಸೌಲಭ್ಯಕ್ಕಾಗಿ ಕಟ್ಟಡ ನಿರ್ಮಿಸುತ್ತಿರುವುದು ನಿಜವೇ;

ಆ) ಹಾಗಿದ್ದಲ್ಲಿ ಈ ಕಟ್ಟಡದ ಅಂದಾಜು ವೆಚ್ಚ, ಈ ಕಟ್ಟಡ ನಿರ್ಮಾಣದ ಗುತ್ತಿಗೆದಾರರು ಯಾರು ಹಾಗೂ ಕಟ್ಟಡ ನಿರ್ಮಾಣಕ್ಕೆ ನಿಗದಿಪಡಿಸಿದ ಅವಧಿ ಎಷ್ಟು ; (ಮಾಹಿತಿ ನೀಡುವುದು)

ಇ) ಈ ಕಟ್ಟಡದ ನಿರ್ಮಾಣ ಕಾಮಗಾರಿಯನ್ನು ಯಾವ ವರ್ಷ ಪ್ರಾರಂಭಿಸಲಾಗಿದೆ ;

ಈ) ಕಟ್ಟಡದ ನಿರ್ಮಾಣ ಕಾಮಗಾರಿ ಪ್ರಸ್ತುತ ಯಾವ ಹಂತದಲ್ಲಿದೆ ?

ಡಿ.ವಿ. ಸದಾನಂದಗೌಡ (ಮುಖ್ಯಮಂತ್ರಿಗಳು)

ಅ) ಹೌದು

ಆ) ಈ ಕಟ್ಟಡದ ಅಂದಾಜು ವೆಚ್ಚ ರೂ. 432.36 ಲಕ್ಷಗಳು. ಟೆಂಡರ್ ಪ್ರೀಮಿಯಂ ಮತ್ತು ಹೆಚ್ಚುವರಿ ಕಾಮಗಾರಿಗಳು ಸೇರಿ ವಾಸ್ತವಿಕ ವೆಚ್ಚ ರೂ. 498.92 ಲಕ್ಷಗಳು.

ಶ್ರೀ ಎಸ್.ಆರ್.ರವಿ, ಮೊದಲನೇ ದರ್ಜೆ ಗುತ್ತಿಗೆದಾರರು, ಬೆಂಗಳೂರು ಈ ಕಾಮಗಾರಿಯ ಗುತ್ತಿಗೆದಾರರು. ಈ ಕಟ್ಟಡ ನಿರ್ಮಾಣಕ್ಕೆ ನಿಗದಿಪಡಿಸಿದ್ದ ಅವಧಿ ಮಳೆಗಾಲ ಹೊರತುಪಡಿಸಿ 10 ತಿಂಗಳು ಆಗಿರುತ್ತದೆ.

ಇ) ಈ ಕಟ್ಟಡದ ನಿರ್ಮಾಣ ಕಾಮಗಾರಿಯನ್ನು ಜನವರಿ 27, 2009 ರಲ್ಲಿ ಪ್ರಾರಂಭಿಸಲಾಗಿದೆ.

ಈ) ಕಟ್ಟಡ ನಿರ್ಮಾಣ ಕಾಮಗಾರಿ ಜನವರಿ 2012 ರಲ್ಲಿ ಪೂರ್ಣಗೊಂಡಿದೆ. ಈ ಹೋಟೆಲ್‌ನ್ನು ಪ್ರಾರಂಭಿಸಲು ಅಗತ್ಯವಿರುವ ಪೀಠೋಪಕರಣಗಳು, ಅಡುಗೆ ಕೋಣೆ ಸುಸಜ್ಜಿತಗೊಳಿಸಿ ಸದ್ಯದಲ್ಲೇ ಹೋಟೆಲ್‌ನ್ನು ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುವುದು.

ಶ್ರೀ ರುದ್ರೇಶ್‌ಗೌಡ ವೈ.ಎನ್. :– ಸನ್ಮಾನ್ಯ ಅಧ್ಯಕ್ಷರೆ, ಇದರಲ್ಲಿ ಉತ್ತರವನ್ನು ಓದಿದೆ. ಇದರಲ್ಲಿ ಮುಖ್ಯವಾಗಿ ಪ್ರವಾಸೋದ್ಯಮ ಕಟ್ಟಡಕ್ಕೆ 498 ಲಕ್ಷ ರೂ.ಗಳು. ಅಂದರೆ 5 ಕೋಟಿ ಹಣವನ್ನು ಉಪಯೋಗಿಸುತ್ತಿದ್ದಾರೆನ್ನುವ ವಿಚಾರ ಹೇಳಿದ್ದಾರೆ. ಸ್ಥಳೀಯ ಶಾಸಕರನ್ನು ಶಂಕುಸ್ಥಾಪನೆಗೂ ಕರೆಯಲಿಲ್ಲ. ಇನ್ನು ಉದ್ಘಾಟನೆಗೂ ಕರೆಯುತ್ತಾರೋ, ಇಲ್ಲವೊ ಗೊತ್ತಿಲ್ಲ. ಈ ಹಂತ ಬಂದಿದೆ. ಹಾಗಾಗಿ ಮುಖ್ಯಮಂತ್ರಿಗಳಿಗೆ ವಿನಂತಿಸುತ್ತಿದ್ದೇನೆ. 5 ಕೋಟಿ ಸರ್ಕಾರಿ ಹಣ. ಇದು ಸರ್ಕಾರದ ಹಣವಲ್ಲದಿದ್ದರೆ ನಾನು ಕೇಳುತ್ತಿರಲಿಲ್ಲ. ಪ್ರವಾಸೋದ್ಯಮ ಇಲಾಖೆಯ ಹಣ ಆಗಿದ್ದರಿಂದ ಇದರ ಶಂಕುಸ್ಥಾಪನೆಗೆ ನಮ್ಮನ್ನು ಕರೆದಿಲ್ಲ ಇನ್ನು ಉದ್ಘಾಟನೆಗೂ ಕರೆಯುವುದಿಲ್ಲವೆಂದು ತಿಳಿದುಕೊಂಡಿದ್ದೇನೆ. ಹಾಗಾಗಿ ಮುಖ್ಯಮಂತ್ರಿಗಳನ್ನು ಕೇಳುತ್ತಿದ್ದೇನೆ. ಇನ್ನೆರಡು ಮೂರು ತಿಂಗಳಿನಲ್ಲಿ ನಡೆಯಲಿರುವ ಉದ್ಘಾಟನೆಗೆ ಕರೆಯಿರಿ ಎಂದು. ಇನ್ನು ಎರಡನೆಯ ಪ್ರಶ್ನೆ ಎಂದರೆ ಬೇಲೂರಿನಲ್ಲಿ ಚೆನ್ನಕೇಶವ ದೇವಸ್ಥಾನ ಇದೆ. ಇದು ಜಗದ್ವಿಖ್ಯಾತ ದೇವಸ್ಥಾನ. ಅಲ್ಲಿ ಸುಮಾರು 10–12 ಎಕರೆ ಜಮೀನು ಪ್ರವಾಸೋದ್ಯಮ ಇಲಾಖೆಯ ಹೆಸರಿನಲ್ಲಿದೆ. ನಮಗೇನು ಬೇಜಾರಾಗುತ್ತದೆಂದರೆ ಮಧ್ಯಮ ವರ್ಗದ ಜನರು, ಬಡವರು ಬಂದಾಗ ಯಾರದೋ ಮನೆಯ ಜಗಲಿಯಲ್ಲಿ ಮಲಗುವ ಸನ್ನಿವೇಶ ನೋಡಿದ್ದೇವೆ. ಶಾಲಾ ಮಕ್ಕಳು ಬರುತ್ತಾರೆ. ಆ ಮಕ್ಕಳು ಎಲ್ಲಿ ಮಲಗುತ್ತಾರೆಂದರೆ, ಮಠದಲ್ಲಿ ಯಾರದೋ ಮನೆಯ ಜಗಲಿಯಲ್ಲಿ ಮಲಗುವ ಸನ್ನಿವೇಶ ನಾವು ಕಣ್ಣಲ್ಲಿ ಕಂಡಿದ್ದೇವೆ. ಆದ್ದರಿಂದ ಅಲ್ಲಿ ಸರ್ಕಾರ ಒಂದು ಯಾತ್ರಿ ನಿವಾಸ ಕಟ್ಟಬೇಕು. ಸರ್ಕಾರದ ಉತ್ತರದಲ್ಲಿ

ಹೇಳಿದ್ದಾರೆ, ಮಳೆಗಾಲವನ್ನು ಹೊರತು ಪಡಿಸಿ ಹತ್ತು ತಿಂಗಳು ಎಂದು ಹೇಳಿದ್ದಾರೆ. ಈಗಾಗಲೇ ಮೂರು ವರ್ಷವಾಗಿದೆ. ಹತ್ತು ತಿಂಗಳು ದಾಟಿ 20 ತಿಂಗಳು ಆಗಿದೆ ಎಂದು ನನಗೆ ಅನಿಸುತ್ತದೆ.

ಅಧ್ಯಕ್ಷರು :– ಉತ್ತರ ಹೇಳಲಿ

ಶ್ರೀ ವೈ.ಎನ್. ರುದ್ರೇಶ್‌ಗೌಡ :– ಆದ್ದರಿಂದ ಮಾನ್ಯ ಮುಖ್ಯಮಂತ್ರಿಗಳು ಗಮನ ಹರಿಸಬೇಕು. ಈ ಒಂದು ಯಾತ್ರಿ ನಿವಾಸವನ್ನು ಬೇಲೂರಿನಲ್ಲಿ ಚೆನ್ನಕೇಶವ ದೇವಸ್ಥಾನ ಇರುವುದರಿಂದ ಈ ಯಾತ್ರಿ ನಿವಾಸವನ್ನು ಬೇಲೂರು ಚೆನ್ನಕೇಶವ ದೇವಸ್ಥಾನಕ್ಕೆ ಕೊಡಬೇಕು. ಅದರಿಂದ ಉಪಯೋಗವಾಗುತ್ತದೆ. ಬಡವರಿಗೆ ಅದರಿಂದ ಹೆಲ್ಪ್ ಆಗುತ್ತದೆ. Middle class ಜನ ಮತ್ತು ಶಾಲಾ ಮಕ್ಕಳಿಗೆ ಅನುಕೂಲವಾಗುತ್ತದೆ.

ಅಧ್ಯಕ್ಷರು : – ಮಾನ್ಯ ಮುಖ್ಯಮಂತ್ರಿಗಳು ಉತ್ತರ ಹೇಳಲಿ.

ಶ್ರೀ ವೈ.ಎನ್. ರುದ್ರೇಶ್‌ಗೌಡ :– ಮಾನ್ಯ ಮುಖ್ಯಮಂತ್ರಿಗಳು ಇರುವುದರಿಂದ, ಪ್ರವಾಸೋದ್ಯಮ ಇಲಾಖೆಯವರು ಇರುವುದರಿಂದ ಅಲ್ಲೇ ಪಕ್ಕದಲ್ಲಿ ಹೇಳಿಬಿಟ್ಟರೆ ಒಂದು ಯಾತ್ರಿ ನಿವಾಸವನ್ನು ರೆಡಿ ಮಾಡಿ ಎಂದರೆ ಇದರಿಂದ ಉಪಯೋಗ ಆಗುತ್ತದೆ ಎಂದು ನನಗೆ ಅನಿಸುತ್ತದೆ.

ಶ್ರೀ ಡಿ.ವಿ. ಸದಾನಂದ ಗೌಡ :– ಮಾನ್ಯ ಸಭಾಧ್ಯಕ್ಷರೆ, ನಿಜ ಅಲ್ಲಿ ಸುಮಾರು 498.92 ಲಕ್ಷ ವೆಚ್ಚದಲ್ಲಿ ಒಂದು ರೆಸ್ಟೋರೆಂಟ್, ಹೋಟೆಲ್ ಮತ್ತು ಸುಮಾರು 20 ಕೊಠಡಿಯ ಹೋಟೆಲ್‌ಗಳನ್ನು ಕಟ್ಟುವಂತಹ ಎಲ್ಲಾ ಕೆಲಸವನ್ನು ಅಲ್ಲಿ ಮಾಡಿದ್ದೇವೆ. ಈಗ ಸನ್ಮಾನ್ಯ ರುದ್ರೇಶ್‌ಗೌಡ ಅವರು ಹೇಳಿದ ರೀತಿಯಲ್ಲಿ ಅಲ್ಲಿ ಸ್ವಲ್ಪ ತಡ ಆಗಿದೆ. ಮಳೆಗಾಲ ಬಿಟ್ಟು ಹತ್ತು ತಿಂಗಳು ಎಂದು ಆಗಿತ್ತು. ಆದರೆ ಅದಕ್ಕಿಂತ ಸ್ವಲ್ಪ ಜಾಸ್ತಿ ಸಮಯವನ್ನು ತೆಗೆದುಕೊಂಡಿದ್ದಾರೆ. ಈಗಾಗಲೇ building complete ಆಗಿದೆ. ಈಗ ಅಲ್ಲಿಗೆ ಬೇಕಾದಂತಹ furniture ಗೆ ಬೇಕಾದಂತಹ tender process ಕೂಡ ಆಗಿದೆ. ಅದು ಇನ್ನೂ ಒಂದೆರಡು ಮೂರು ತಿಂಗಳಲ್ಲಿ furnishing ಕೂಡ ಆಗುತ್ತದೆ. ನಾನು ಅವರಿಗೆ ಭರವಸೆ ಕೊಡಲಿಕ್ಕೆ ಇಚ್ಛೆ ಪಡುತ್ತಿದ್ದೇನೆ. Tourism Department ನವರ ಜೊತೆ ಮಾತನಾಡಿ ಮಾನ್ಯ ರುದ್ರೇಶ್ ಗೌಡ ಅವರಿಗೆ ದಿನಾಂಕ, ಸಮಯ ತಿಳಿಸಿ ಅವರ ಅಧ್ಯಕ್ಷತೆಯಲ್ಲಿ ಯಾತ್ರಿ ನಿವಾಸವನ್ನು ಉದ್ಘಾಟನೆ ಮಾಡಿಸುವಂತಹ ಎಲ್ಲಾ ಕಾರ್ಯಕ್ರಮಗಳನ್ನು ಕೈಗೊಳ್ಳುತ್ತೇವೆ. ಮಾನ್ಯ ರುದ್ರೇಶ್ ಗೌಡರವರನ್ನು ಕರೆಸಿ ಖಂಡಿತವಾಗಿ ಉದ್ಘಾಟನೆ ಮಾಡಿಸುವಂತಹ ಎಲ್ಲಾ ಕಾರ್ಯಕ್ರಮಗಳನ್ನು ನಾವು ಮಾಡುತ್ತೇವೆ. ಜೊತೆಯಲ್ಲಿ ಇನ್ನೂ ಒಂದು ವಿಚಾರ ಹೇಳಿದರು. ಅಲ್ಲಿ

ಚೆನ್ನಕೇಶವ ದೇವಸ್ಥಾನ ಇದೆ, ಅಲ್ಲೊಂದು ಯಾತ್ರಿ ನಿವಾಸ ಬೇಕು ಎಂದು ಹೇಳುವಂತಹ ಮಾತನ್ನು ಅವರು ಉಲ್ಲೇಖ ಮಾಡಿದ್ದಾರೆ. ಸುಮಾರು 12 ಎಕರೆ ಜಾಗ ಇರುವಂತಹದ್ದು ನಿಜ ಇದೆ, ಆದರೆ ಅದು Archeological Departmentನ ವ್ಯಾಪ್ತಿಯಲ್ಲಿ ಬರುವಂತಹ ಹಿನ್ನೆಲೆಯಲ್ಲಿ ಅವರ ಚೌಕಟ್ಟುಗಳು 300 ಮೀಟರ್ ವ್ಯಾಪ್ತಿಯಲ್ಲಿ ನಾವೇನು ಅವರ ಪರ್ಮಿಷನ್ ಇಲ್ಲದೇ ಕೈಗೊಳ್ಳುವಂತಹ ಸಂದರ್ಭಗಳನ್ನು ಮಾಡಲಿಕ್ಕೆ ಆಗುತ್ತಿಲ್ಲ. ಆದರೆ ನಾವು ಆ ಇಲಾಖೆಯ ಜೊತೆಗೆ ಸಂಪರ್ಕ ಮಾಡಿ ರುದ್ರೇಶ್ ಗೌಡರ ಅಪೇಕ್ಷೆಯಂತೆ ಏನಾದರೂ ಅವಕಾಶ ಕೊಟ್ಟಲ್ಲಿ ಅಲ್ಲಿ ಮುಂದಿನ ದಿನಗಳಲ್ಲಿ ಯಾವುದಾದರೂ ಒಂದು ಯಾತ್ರಿ ನಿವಾಸವನ್ನು ಮಾಡುವಂತಹ ಪ್ರಯತ್ನಗಳನ್ನು ನಾವು ಮಾಡುತ್ತೇವೆ.

ಶ್ರೀ ವೈ.ಎನ್. ರುದ್ರೇಶ್‌ಗೌಡ :– ಪಕ್ಕದಲ್ಲಿ 10 ಎಕರೆ ಲ್ಯಾಂಡ್ ಇದೆ.

ಅಧ್ಯಕ್ಷರು :– ಆಯಿತು, ಅವರು ಉತ್ತರ ಹೇಳುವುದಕ್ಕೂ ಅವಕಾಶ ಕೊಡದಿದ್ದರೆ ನಾನು ಮುಂದಿನ ಪ್ರಶ್ನೆಯನ್ನು ಕರೆಯುತ್ತೇನೆ.

ಶ್ರೀ ಡಿ.ವಿ. ಸದಾನಂದಗೌಡ :– ನಾನು ಹೇಳುತ್ತೇನೆ. ಖಂಡಿತವಾಗಿ ಮಾನ್ಯ ರುದ್ರೇಶ್ ಗೌಡರು ಒಂದು ಪ್ರಪೋಸಲ್ ಕೊಟ್ಟರೆ ಅದನ್ನು ಪ್ರವಾಸೋದ್ಯಮ ಇಲಾಖೆ ಪರಿಗಣಿಸುತ್ತದೆ ಮತ್ತು ಅದಕ್ಕೆ ಬೇಕಾದಂತಹ ಸೂಕ್ತ ಹಣಕಾಸು ವ್ಯವಸ್ಥೆಯನ್ನು ನಾವು ಕೊಡಲು ಸಿದ್ಧರಿದ್ದೇವೆ.

ಪ್ರಶ್ನೆ ಸಂಖ್ಯೆ 22(104) (ಶ್ರೀ ಸಿ.ಬಿ. ಸುರೇಶ್ ಬಾಬು)
(ಮಾನ್ಯ ಸದಸ್ಯರು ಹಾಜರಿರಲಿಲ್ಲ)

ಬೆಂಗಳೂರು ರೈಲು ಮಾರ್ಗದ ನಿರ್ಮಾಣ
23 : (167)

ಶ್ರೀ ರೇವಣ್ಣ ಹೆಚ್.ಡಿ. : – (ಹೊಳೆನರಸೀಪುರ)

ಅ) ಹಾಸನ – ಬೆಂಗಳೂರು ರೈಲ್ವೆ ಮಾರ್ಗದ ನಿರ್ಮಾಣ ಕಾರ್ಯಕ್ಕೆ ನೆಲಮಂಗಲ–ಸೋಲೂರು, ಕುಣಿಗಲ್ – ಯಡಿಯೂರು ಮತ್ತು ಹಿರೀಸಾವೆ – ಶ್ರಾವಣಬೆಳಗೊಳದ ಮಾರ್ಗದಲ್ಲಿ ಭೂಸ್ವಾಧೀನ ಪ್ರಕ್ರಿಯೆ ವಿಳಂಬ ನೀತಿಯಿಂದಾಗಿ ರೈಲ್ವೆ ಮಾರ್ಗದ ಕಾಮಗಾರಿಯು ನೆನೆಗುದಿಗೆ ಬಿದ್ದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರವು ಕೈಗೊಂಡಿರುವ ಕ್ರಮಗಳೇನು;